International Journal of Kannada Research 2021; 7(1): 86-88



International Journal of Kannada Research
www.kannadajournal.com

**ISSN: 2454–5813**
IJKR 2021; 7(1): 86-88
© 2021 IJKR
www.kannadajournal.com
Received: 13-11-2020
Accepted: 15-12-2020

**ಶ್ರೀರಾಮ. ಎಂ**
ಸಹಾಯಕ ಪ್ರಾಧ್ಯಾಪಕರು
ಬಿ.ಬಿ.ಎಂ ವಿಭಾಗ
ನ್ಯೂ ಹಾರಿಜನ್ ಕಾಲೇಜು
ಮಾರತ್ತಹಳ್ಳಿ
ಬೆಂಗಳೂರು

**Corresponding Author:**
**ಶ್ರೀರಾಮ. ಎಂ**
ಸಹಾಯಕ ಪ್ರಾಧ್ಯಾಪಕರು
ಬಿ.ಬಿ.ಎಂ ವಿಭಾಗ
ನ್ಯೂ ಹಾರಿಜನ್ ಕಾಲೇಜು
ಮಾರತ್ತಹಳ್ಳಿ
ಬೆಂಗಳೂರು

# ಕೈಲಾಸಂರ ಜೀವನ ವೃತ್ತಾಂತ

**ಶ್ರೀರಾಮ. ಎಂ**

ಕನ್ನಡಕ್ಕೊಬ್ಬನೇ ಕೈಲಾಸಂ, ಕನ್ನಡ ಪ್ರಹಸನ ಪಿತಾಮಹ ಕೈಲಾಸಂ, ಎಂದೆಲ್ಲಾ ಘೋಷಿತ ಬಿರುದುಗಳನ್ನು ಪಡೆ ದಿರುವ ಟಿ.ಪಿ.ಕೈಲಾಸಂರವರ ಪೂರ್ಣ ಹೆಸರು 'ತ್ಯಾಗರಾಜ ಪರಮಶಿವ ಕೈಲಾಸಂ' ಎಂದು. ೧೮೮೫ರಲ್ಲಿ ಬೆಂಗ ಳೂರಿನ ತಾರಾಮಂಡಲ ಪೇಟೆಯಲ್ಲಿ ಜನಿಸಿದ ಕೈಲಾಸಂ, ಇವರ ಜನ್ಮ ದಿನಾಂಕದ ಬಗ್ಗೆ ಅನೇಕ ವಿದ್ವಾಂಸರಲ್ಲಿ ಅನುಮಾನಾಸ್ಪದದ ವಿಷಯವಾಗಿದೆ. ಏಕೆಂದರೆ ಕೈಲಾಸಂರು ನಿರ್ಧಿಷ್ಟವಾಗಿ ಹುಟ್ಟಿದ ದಿನವಾಗಲೀ, ಸ್ಥಳವಾಗಲೀ ಹಾಗೇ ಅವರು ಸತ್ತ ದಿನವಾಗಲೀ ಕರಾರುವಕ್ಕಾಗಿ ಹೇಳಲಾಗುವುದಿಲ್ಲ. ಇವೆಲ್ಲವೂ ನಿಘೂಡ ಹಾಗೂ ಸಂಶಯಾತ್ಮ ಕವಾಗಿದೆ.

ಕೆಲವರ ಪ್ರಕಾರ ಕೈಲಾಸಂ ಹುಟ್ಟಿದ್ದು ೨೯-೭-೧೮೮೪ ಎಂದಿದೆ, ಮತ್ತೆ ಕೆಲವರು ೨೯-೭-೧೮೮೫ ರಲ್ಲಿ ಬೆಂಗಳೂ ರಿನ ತಾರಮಂಡಲ ಪೇಟೆಯಲ್ಲಿ ಜನಿಸಿದರು ಎಂದು ಹೇಳಿದ್ದಾರೆ. ಕಂದಾಡೆ ಕೃಷ್ಣ ಅಯ್ಯಾಂಗಾರ್ ಮತ್ತೆ ಕೆಲವರ ಪ್ರಕಾರ ಕೈಲಾಸಂರ ಜನನ ೨೯-೭-೧೮೮೬ ರಲ್ಲಿ ಎಂದು ಗುರ್ತಿಸಿದ್ದಾರೆ. ಹಾಗೆ ಕೈಲಾಸಂರ ಭಾವ ಮೈದುನ ಆರ್.ಎಸ್.ಚಂದ್ರಶೇಖರ ಹೇಳುವಂತೆ ಕೈಲಾಸಂ ಜನನ ೧೭-೮-೧೮೧೮೪ರಲ್ಲಿ ಮೈಸೂರಿನಲ್ಲಿ ಜನಿಸಿದರು ಎಂದು ಹೇಳಿದ್ದಾರೆ. ಹೀಗೇ ಕೈಲಾಸಂರ ಜನನದ ವಿಷಯಕ್ಕೆ ಸಂಬಂಧಿಸಿದಂತೆ ಹಲವು ಗೊಂದಲಗಳನ್ನು ಕಾಣುತ್ತೇವೆ.

ಕೈಲಾಸಂರವರ ತಂದೆಯ ಹೆಸರು ಪರಮಶಿವ ಐಯ್ಯರ್ ಇ ಇವರು ಸೆಂಟ್ರಲ್ ಕಾಲೇಜಿನಲ್ಲಿ ರಾಸಾಯನಶಾಸ್ತ್ರದ ಧ್ಯಾಪಕರಾಗಿ ನಂತರ ಲಾ ಕಮೀಷಿನರ್ ಆಗಿ ನೇಮಕಗೊಂಡು ಕೆಲ ಕಾಲದ ಮೇಲೆ ನ್ಯಾಯಾಂಗ ವಿಭಾಗಕ್ಕೆ ವರ್ಗ ಹೊಂದಿ ನಂತರ ನ್ಯಾಯಾಧೀಶರಾಗಿ ನಿವೃತ್ತಿ ಪಡೆದರು.

ಕೈಲಾಸಂರ ತಾಯಿಯವರು ಶ್ರೀಮತಿ ಕಮಲಮ್ಮ ಹಳೆಯ ಮೈಸೂರಿನ ಸುಪ್ರಸಿದ್ಧರಾಗಿದ್ದ ಶ್ರೀ ಸುಬ್ಬರಾಯ ಶಾಸ್ತ್ರಿಯ ವರ ಮಗಳು. ಸಂಪ್ರದಾಯಸ್ಥ ಕುಟುಂಬದವರಾದ ಈಕೆ ಪುರಾಣ ಪುಣ್ಯ ಕತೆಗಳಲ್ಲಿ ಬಹಳ ಶ್ರದ್ಧೆ, ಪೂಜೆ, ಪುನಸ್ಕಾರ, ವ್ರತನಿಷ್ಠೆ ಇವುಗಳಲ್ಲಿ ತುಂಬಾ ಆಸಕ್ತಿಯನ್ನು ಹೊಂದಿದ್ದರಿಂದ ರಾಮಾಯಣ ಮಹಾಭಾರತದ ಕತೆಗಳು, ಉಪಕತೆಗಳ ಬಗ್ಗೆ ಗೊತ್ತಿತ್ತು.

ಇದರಿಂದಲೇ ಅವರು ಕೈಲಾಸಂಗೆ ಕಥೆಗಳನ್ನು ಹೇಳಿದ್ದರಿಂದ ಮುಂದೆ ಅವರು ಸುಪ್ರಸಿದ್ಧ ನಾಟಕಕಾ ರರಾಗಲು ಸಾಧ್ಯವಾಯಿತು. ಕೈಲಾಸಂಗೆ ಕೇವಲ ಅವರ ತಂದೆ-ತಾಯಿಗಳ ಪ್ರಭಾವಗೊಂಡಿದಲ್ಲದೆ ಇವರ ದೊಡ್ಡಪ್ಪ ನವರಾದ ಶ್ರೀ.ಟಿ.ಅಮೃತಲಿಂಗ ಐಯ್ಯರ್ ರವರೂ ಸ್ವತಂತ್ರವಾದ ಆಲೋಚನಾ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಪ್ರೇ ರಣೆಯಾದರು. ಶಾಲೆಯ ರಜಾ ದಿನಗಳಲ್ಲಿ ಇವರ ಮನೆಗೆ ಬರುತ್ತಿದ್ದ ಕೈಲಸಂಗೆ ಇವರ ಮಾರ್ಗದರ್ಶನವು ಬಹಳ ಉ ಪಯುಕ್ತವಾದವು.

ಶಾಲೆಗೆ ಸೇರುವ ವಯಸ್ಸು ಬಂದಾಗ ಕೈಲಾಸಂ ಸುಲ್ತಾನ್ ಪೇಟೆಯ ಆಂಗ್ಲೋವರ್ನಾಕ್ಯುಲರ್ ಸ್ಕೂಲಿಗೆ ದಾಖಲಾದ ರು.ಈ ಶಾಲೆ ಇಂಗ್ಲೀಷ್ ಕಲಿಯುವುದಕ್ಕೆ ಮೊದಲ ಸ್ಥಾನವನ್ನು ಕೊಡಲಾಗುತ್ತಿತ್ತು. ಇದಲ್ಲದೆ ನಾಡ ಭಾಷೆ ಹಾಗೆಉರ್ದು ವಿನಲ್ಲಿ ಪರಿಶ್ರಮ ದೊರಕಿತು. “ಸುಲ್ತಾನ್ ಪೇಟೆಯ ಸ್ಕೂಲಿನಲ್ಲಿ ನಡೆಯುತ್ತಿದ್ದ ಪಾಠಾವಳಿಯ ವಿತರಣೆಯೋ ಅಲ್ಲಿಯ ವಿದ್ಯಾಗುರುಗಳ ಹಾವಭಾವ ವಿಲಾಸಗಳೋ ಆ ಮಧ್ಯೆ ಅತಿ ಚುರುಕುತನದಿಂದ, ತುಂಟತನ ಮಾಡುತ್ತಿದ್ದ. ಆ ಕೈಲಾ ಸಂನ ತಂಟೆ ತಕರಾರು ಆತನೇ ಬಣ್ಣಿಸಬೇಕು” ಎಂದು ಕೈಲಾಸಂನ ನಿಕಟ ಹಾಗೂ ಆತ್ಮೀಯ ವರ್ತಿಗಳಾಗಿದ್ದ ಕಂದಾಡೆ ಕೃಷ್ಣ ಅಯ್ಯಾಂಗಾರ್ ರು ‘ನಾನು ಕಂಡ ಕೈಲಾಸಂ’ ನಲ್ಲಿ ಹೇಳಿದ್ದಾರೆ.

ಕೈಲಾಸಂನ ತಂದೆಗೆ ಹಾಸನಕ್ಕೆ ವರ್ಗವಾದ್ದರಿಂದ ಕೈಲಾಸಂ ಹಾಸನ ಶಾಲೆಯೊಂದರಲ್ಲಿ ವಿದ್ಯಾಭ್ಯಾಸ ಮುಂದುವ ರಿಸಿದರು. ತದನಂತರ ಮೈಸೂರಿನಲ್ಲಿಯೂ ಸ್ವಲ್ಪಕಾಲ ನಡೆಯಿತು. ಮೈಸೂರು ಆ ಕಾಲದಲ್ಲಿ ಗರಡಿ ಮನೆಗಳಿಗೆ ಪ್ರಸಿ ದ್ಧವಾಗಿತ್ತು. ಇದರಿಂದ ಗರಡಿ ಮನೆಯಲ್ಲಿ ಕೈಲಾಸಂ ಬೆಳೆದುದರಿಂದ ತಮ್ಮ ನಾಟಕಗಳಲ್ಲಿ ಬಳಸಿಕೊಂಡಿದ್ದಾರೆ. ಹೈ ಸ್ಕೂಲಿನ ನಂತರ ಕೈಲಾಸಂ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿ ೧೯೦೭ ನೇ ಇಸವಿಯಲ್ಲಿ ಬಿ.ಎ. ಪರೀಕ್ಷೆಯಲ್ಲಿ ಮದ್ರಾಸು ಪ್ರಾಂತ್ಯಕ್ಕೆ ಪ್ರಥಮರಾಗಿ ಉತೀರ್ಣಗೊಂಡು ಮದರಾಸು ವಿಶ್ವವಿದ್ಯಾಲಯದಿಂದ ‘ಕ್ರೋಮಾರ್ಟಿ’ ಪದಕವ ನ್ನು ಗಳಿಸಿದರು.

ಅತ್ಯುತ್ತಮ ವಿದ್ಯಾರ್ಥಿಯಾಗಿದ್ದ ಕೈಲಾಸಂರನ್ನು ಇನ್ನೂ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ೧೯೦೯ ರಲ್ಲಿ ಇಂಗ್ಲೇಡಿಗೆ ಕಳು ಹಿಸಿದರು. ಅಲ್ಲಿ ರಾಯಲ್ ಕಾಲೇಜ್ ಆಪ್ ಸೈನ್ಸ್ ನಲ್ಲಿ ವ್ಯಾಸಂಗ ಮಾಡಿದರು. ಇಂಗ್ಲೇಡಿನ ನಾಟಕ ಕಲೆಯಲ್ಲಿ ಪರಿಶ್ರ ಮ ಪಡೆದು ಹಾಸ್ಯವೇ ಮುಖ್ಯವಾದ ಬರ್ಲ್ ಸ್ಕಗಳ ಲಂಡನ್ನಿನಲ್ಲಿ ಜನಪ್ರಿಯವಾಗಿದ್ದವು. ಇವು ಕೈಲಾಸಂರನ್ನು ಬಹಳ ಷ್ಟುಆಕರ್ಶಿಸಿತು. ಮುಂದೆ ತಮ್ಮ ನಾಟಕದಲ್ಲಿ ಬಳಸಿಕೊಂಡರು, ಹಾಗೆ ಇವರು ಲಂಡನ್ನಿನಲ್ಲಿದ್ದಾಗ ಅಲ್ಲಿನ ಸುಪ್ರಸಿದ್ಧ ವಾದಗ್ಲೋಬ್ ಥಿಯೇಟರಿನಲ್ಲಿ ವರ್ಷದಲ್ಲಿ ಮೂರು ನಾಲ್ಕು ತಿಂಗಳ ಕಾಲ ಕಲಾವಿದರಿಂದ ನಾಟಕ ನಡೆಯುತ್ತಿತ್ತು. ನಾ ಟಕವನ್ನುನೋಡಲು ಖರ್ಚಿಗೆ ಹಣ ಕೂಡಿ ಹಾಕಲು ಅವರು ಉಳಿದ ಕಾಲದಲ್ಲಿ ಹಣ ಸಂಗ್ರಹಿಸಿ ನಾಟಕ ನೋಡುತ್ತಿ ದ್ದ ರು. ಬರ್ನಾಡ್ಷಾ ಹಾಗೂ ಇಬ್ಸನ್ ರವರ ಸಾಮಾಜಿಕ ನಾಟಕಗಳು ಇವರ ಮೇಲೆ ಅತಿಯಾದ ಪರಿಣಾಮ ಬೀರಿತು.

ವಿದ್ಯಾಭ್ಯಾಸಕ್ಕೆಂದು ವಿದೇಶಕ್ಕೆ ತೆರಳುವ ಮುನ್ನ ಕೈಲಾಸಂರವರು ಮೈಸೂರು ಸಂಸ್ಥಾನದ ಡೈಪ್ಯೂಟಿ ಚೀಪ್ ಇಂಜಿ ನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದ ಆರ್.ವಿ.ಸುಂದರ ಅಯ್ಯರ್ ರವರ ಮಗಳು ಕಮಲಮ್ಮ ಎಂಬಾಕೆಯೊಡನೆ ವಿವಾಹ ವನ್ನು ೧೯೦೭ರಲ್ಲಿ ನಡೆಯಿತು. ೧೯೧೫ ರಲ್ಲಿ ಭಾರತಕ್ಕೆ ವಾಪಸ್ಸಾದ ಮೇಲೆ ಎರಡು ವರ್ಷಗಳಲ್ಲಿ ಕೈಲಾಸಂ ಎರಡು ಹೆಣ್ಣು ಮಕ್ಕಳ ತಂದೆಎನಿಸಿಕೊಂಡರು. ೧೯೧೫ರಲ್ಲಿ ಸ್ವದೇಶಕ್ಕೆ ವಾಪಸ್ಸಾದ ನಂತರ ಮೈಸೂರು ಸರ್ಕಾರದ ಭೂ ಗರ್ಭ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ಕೈಲಾಸಂರು ಕನ್ನಡ ನಾಟಕ ಸಾಹಿತ್ಯದಲ್ಲಿ ಬಹುಮುಖ ಪ್ರತಿಭೆ ವ್ಯಕ್ತಿತ್ವ ಹಾಗೂ ತಮ್ಮ ದಾರುಣ ಬದುಕಿನಲ್ಲೂ ಅವರು ತೋರಿದ ಸಾಧನೆ ನಿಜಕ್ಕೂ ವೈವಿಧ್ಯಮಯವಾದದ್ದು ಹಾಗೂ ಆಶ್ಚರ್ಯ ಕರವಾದದ್ದು. ಕೈಲಾಸಂ ವ್ಯಕ್ತಿಯಾಗಷ್ಟೇ ವಿಚಿತ್ರರಲ್ಲ ಅವರ ಜೀವನವೇ ವಿಚಿತ್ರವಾದದ್ದು. ಒಂದು ಕಾಲದಲ್ಲಿ ಆಗರ್ಭ ಶ್ರೀಮಂತನೆನಿಸಿದ್ದು ತುಂಬಾ ವಿದ್ಯಾವಂತ ಹಾಗೂ ಪ್ರತಿಭಾವಂತನಾಗಿದ್ದು ಆರಂಭದಲ್ಲೇ ಉನ್ನತ ಮಟ್ಟದ ಕೆಲಸವನ್ನು ಗಿಟ್ಟಿಸಿಕೊಂಡರೂ ಗಟ್ಟಿಯಾಗಿ ಬೇರೂರಿ ತನ್ನ ನೆಲೆ ನಿಲುವುಗಳನ್ನು ಭದ್ರಪಡಿಸಿಕೊಳ್ಳಲು ಸಾಧ್ಯವಾಗದೆ ಧುರ್ವಿಧಿಯ ಅಟ್ಟಹಾಸಕ್ಕೆ ಸಿಕ್ಕಿ ಸರ್ವಸ್ವವನ್ನು ಕಳೆದುಕೊಂಡು ಸಮಾಜದ ಬದುಕಿಗೆ ಅಪವಾದವೆಂಬಂತೆ ಅನೇಕ ವರ್ಷ ಅನಾಥವಾಗಿ ನಿರ್ಗತಿಕನಾಗಿ ಅಲೆಮಾರಿ ಜೀವನವನ್ನು ಅನುಭವಿಸಿದರು.

ಇವರ ಬದುಕು ಅಸಂಬದ್ಧ ಕ್ರಮದಲ್ಲಿ ಸಾಗುತ್ತಿತ್ತು. ಊಟ ಉಪಚಾರ, ತಿಂಡಿ-ತೀರ್ಥ, ಬಟ್ಟೆ-ಬರೆ ಇವುಗಳನ್ನು ಕೈಲಾಸಂಗಣನೆಗೆ ತೆಗೆದುಕೊಳ್ಳದೆ ಇರುತ್ತಿದ್ದ ಇವರ ಸ್ಥಿತಿಯನ್ನು ಕಂಡು ಇವರ ಶಿಷ್ಯರು ತಂದಿಟ್ಟರೆ ಊಟ ಇಲ್ಲದಿದ್ದರೆ ಇಲ್ಲ. ಕೈಲಾಸಂ ಎಚ್ಚರದಿಂದಿದ್ದಾಗ ಸದಾ ಕೈ ಬೆರಳುಗಳ ಮಧ್ಯೆ ಸಿಗರೇಟು ಇರುತ್ತಿತ್ತು. ಮಧ್ಯೆ ಕಾಫಿ, ಮಧ್ಯಪಾನ ಹರಕಲು ಚಾಪೆಯೇ ಹಾಸಿಗೆ ಗಾಳಿಯಿಲ್ಲದ ಹರಿದ ಪುಟ್ ಬಾಲ್ ತಲೆದಿಂಬು ಅಷ್ಟೇ. ಕೈಲಾಸಂ ಕೇವಲ ನಾಟಕಕಾ ರರಾಗಿರದೇ ಅವರು ಒಬ್ಬಕ್ರೀಡಾಪಟುವಾಗಿದ್ದವರು. ಇದರಿಂದ ಪುಟ್ ಬಾಲ್ ಮತ್ತು ಹಾಕಿ ಆಡುವುದರಲ್ಲಿ ಇವರಿಗೆ ತುಂಬಾ ಆಸಕ್ತಿ ಇದ್ದುದರಿಂದ ಎರಡೂ ಆಟಗಳಲ್ಲಿ ಗೋಲ್ ಕೀಪರ್ ಸ್ಥಾನದಲ್ಲಿ ಹೆಸರು ಮಾಡಿದರು.

ಕೈಲಾಸಂ ಅವರು ಇಗ್ಲೇಂಡಿಗೆ ಉನ್ನತ ವ್ಯಾಸ೯ಗಕ್ಕೆ ಹೋದವರು ಅವರು ವಿದ್ಯಾರ್ಥಿಯಾಗಿದ್ದಾಗಲೇ ಪಾಶ್ಚಾತ್ಯ ರಂಗಭೂಮಿಯ ಎಲ್ಲ ಬಗೆಯ ವೈಚಾರಿಕ ಅಂಶಗಳನ್ನು ಮನಂಡರು ಕನ್ನಡ ರಂಗಭೂಮಿಗೆ ಹೊಸತನದ ಕಾಯಕಲ್ಪ ಮಾಡಬೇಕೆಂದು ಆಳವಾಗಿ ಚಿಂತಿಸಿದವರು. ಸ್ವದೇಶಕ್ಕೆ ಹಿಂದಿರುಗಿದ ಮೇಲೆ ಭಾರತೀಯ ಸಮಾಜದ ಅವೈಜ್ಞಾನಿಕ ವಿಚಾರಗಳನ್ನು ಖಂಡಿಸಿದರು. ವಿಡಂಬನೆಯನ್ನು ನಿಚ್ಚಳವಾಗಿ ಬಳಸುತ್ತಾ ನಮ್ಮ ಮೂಡನಂಬಿಕೆಗಳ ವಿರುದ್ಧ ವ್ಯಂಗ್ಯ ನುಡಿಗಳನ್ನುನಾಟಕಗಳಲ್ಲಿ ದಟ್ಟವಾಗಿ ಬರೆದು ತಮ್ಮ ಮೊನಚು ಭಾಷೆಯಾದ ಆಂಗ್ಲಮಿಶ್ರಿತ ಕನ್ನಡವನ್ನೇ ವಿಶೇಷವಾಗಿ ಪ್ರಯೋಗಿಸಿ, ಹಾಸ್ಯವನ್ನು ಉಣಿಸಿ ಹೊಸದೊಂದು ಬಗೆಯ ಶೈಲಿಗೆ ಕಾರಣರಾದವರು.

“ಪ್ರಹಸನ ಪಿತಾಮಹ” ಎನಿಸಿಕೊಳ್ಳುವ ಮೂಲಕ ಕನ್ನಡ ರಂಗಭೂಮಿಯಲ್ಲಿ ನವ ಜಾಗೃತಿಗೆ ನಾಂದಿ ಹಾಕಿದಮಹಾನ್ ಲೇಖಕರು ಅದ್ವಿತೀಯ ಪ್ರತಿಭಾವಂತರು. ಕನ್ನಡ ನಾಟಕಗಳಲ್ಲಿ ಸಾಮಾಜಿಕತೆಯೇ ಇರದಿದ್ದ ಕಾಲದಲ್ಲಿ ಆ ಕಾಲದಲ್ಲಿ

ಎ.ಡಿ.ಎ. ಎಂಬ ಸಂಸ್ಥೆ ಬೆಂಗಳೂರಿನಲ್ಲಿದ್ದು ಅದರ ಪ್ರಧಾನ ಪೋಷಕರಾಗಿದ್ದ ಯುವರಾಜ ಶ್ರೀ ಕಂಠೀರವ ನರಸರಾ ಜಒಡೆಯರ್ ರವರು ೧೯೧೮ ರಲ್ಲಿ ಈ ಸಂಸ್ಥೆಯನ್ನು ಏರ್ಪಡಿಸಿ ಆ ಸ್ವರ್ಧೆಗೆ ಕೈಲಾಸಂರ ‘ಟೊಳ್ಳು ಗಟ್ಟಿ’ ನಾಟಕವನ್ನು ಕಳುಹಿಸಲಾಯಿತು. ಟೊಳ್ಳು ಗಟ್ಟಿ ಆ ವರ್ಷದ ಉತ್ತಮ ನಾಟಕಗಳೆಂದು ಪರಿಗಣಿಸಲ್ಪಟ್ಟಿತು. ಮೊದಲನೆಯ ಬಹು ಮಾನ ಹಾಗೂ ರಜತ ಪದಕವನ್ನು ಗಳಿಸಿತು. ಎರಡನೆಯ ಬಹುಮಾನ ಸಂಸರ ‘ಸುಗುಣ ಗಂಭೀರ’ ಎಂಬ ನಾಟಕ. ಈ ಸ್ವರ್ಧೆಯ ತೀರ್ಪುಗಾರರು ಬಿ.ಎಂ.ಶ್ರೀ, ನಾಗಪುರಂ ವೆಂಕಟೇಶ ಐಯ್ಯಾಂಗಾರ್ ಮತ್ತು ಬೆನಗಲ್ ರಾಮರಾವ್ ಆಗಿದ್ದರು.

ಕೈಲಾಸಂ ಸಮಾಜ ಜೀವನದ ವಿಮರ್ಶೆ ಒಂದು ಕಡೆ ಸತ್ಯ ಸಜ್ಜನಿಕೆ ನಿಜವಾಗಿ ಎಲ್ಲಿದೆ ಎಂದು ಸ್ಪುಟವಾಗಿ ಕಾಣಿಸುತ್ತಿ ದೆ. ಅವರ ನಾಟಕಗಳು ಕನ್ನಡದಲ್ಲಿ ಇಲ್ಲದಿದ್ದ ಒಂದು ರೂಪಕ ಪ್ರಪಂಚವನ್ನು ನಿರ್ಮಾಣ ಮಾಡಿದರು.೧೯೪೫ ರಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ ತನ್ನ ವಾರ್ಷಿಕ ಅಧಿವೇಶನದ ಅಧ್ಯಕ್ಷರಾಗಿದ್ದ ಕೈಲಾಸಂ ಕೈಲಾಸವಾಸಿಗಳಾದರು. ಇವರು ಸತ್ತಿದ್ದೂ ಸಹ ಸಂಶಯತ್ಮಕವಾದದ್ದು. ೨೩-೧೧-೧೯೪೬ ರ ರಾತ್ರಿಯೋ ಅಥವಾ ೨೪-೧೧ ೧೯೪೬ರ ಮುಂಜಾನೆಯೋ ತಿಳಿಯದೆ ೨೩ ರ ರಾತ್ರಿ ಊಟ ಮಾಡಿ ಮಲಗಿದವರು ೨೪ರ ಬೆಳಗ್ಗೆ ಇಲ್ಲವಾದರು.

**ಪರಾಮರ್ಶನ ಗ್ರಂಥಗಳು**

1. ಕೈಲಾಸಂ - ಅ.ನ.ಕೃ
2. ಕನ್ನಡಕ್ಕೊಬ್ಬನೇ ಕೈಲಾಸಂ - ಬಿ.ಎಸ್. ಕೇಶವ ರಾವ್
3. ಕೈಲಾಸಂ ಮತ್ತು ನಾನು - ರಾಶಿ
4. ಕೈಲಾಸಂ ನೆನಪು ಮತ್ತು ಕೈಲಾಸಂ ಕಥನ - ಜಿ.ಪಿ. ರಾಜರತ್ನಂ
5. ನಮ್ಮ ಕೈಲಾಸಂ - ಸಂಪಾದಕರು: ಪ್ರೊ.ಚಿ. ಶ್ರೀನಿವಾಸರಾಜು